# ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ: ಎಸ್‌ವೈಎನ್/ಎಸ್1/ವಿ.ಸ./2022-23

ಜ್ಞಾನಭಾರತಿ
ಬೆಂಗಳೂರು-560 056
ದಿನಾಂಕ: 31-03-2023

**ಗೆ,**

***ಸಿಂಡಿಕೇಟ್ ಸದಸ್ಯರು,***
ಬೆಂಗಳೂರು ವಿಶ್ವವಿದ್ಯಾಲಯ,
ಬೆಂಗಳೂರು.

**ಮಾನ್ಯರೆ,**

**ವಿಷಯ:** ದಿನಾಂಕ 21-03-2023 ರಂದು ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳು.

***

ದಿನಾಂಕ 21-03-2023 ರಂದು ಮಧ್ಯಾಹ್ನ 1.00 ಗಂಟೆಗೆ ಬೋರ್ಡ್ ರೂಮ್, ಆಡಳಿತ ಕಚೇರಿ ಕಟ್ಟಡ, ಜ್ಞಾನಭಾರತಿ ಆವರಣ, ಬೆಂಗಳೂರು-560 056, ಇಲ್ಲಿ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ ಬೆಂಗಳೂರು ವಿಶ್ವವಿದ್ಯಾಲಯ ಪರಿನಿಯಮಾವಳಿ 5.16 ರನ್ವಯ ಕಳುಹಿಸಲಾಗಿದೆ.

ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡಾವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ನಡಾವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ ಸದರಿ ಪರಿನಿಯಮಾವಳಿಯನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

**ಕುಲಸಚಿವರು** 31/3/23

ಲಗತ್ತು: ಮೇಲಿನಂತೆ.

# ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ: ಎಸ್‌ವೈಎನ್/ಎಸ್1/ವಿ.ಸ./2022-23

ಜ್ಞಾನಭಾರತಿ
ಬೆಂಗಳೂರು-560 056
ದಿನಾಂಕ: 31.03.2023

**ದಿನಾಂಕ 21-03-2023 ರಂದು ಮಧ್ಯಾಹ್ನ 1.00 ಗಂಟೆಗೆ ಬೋರ್ಡ್ ರೂಮ್, ಆಡಳಿತ ಕಚೇರಿ ಕಟ್ಟಡ, ಜ್ಞಾನಭಾರತಿ ಆವರಣ, ಬೆಂಗಳೂರು-560 056, ಇಲ್ಲಿ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳು.**

ಹಾಜರಾದ ಸದಸ್ಯರು:

1. ಪ್ರೊ. ಡಾ. ಜಯಕರ ಎಸ್ ಎಂ ಕುಲಪತಿಗಳು – ಸಭಾಧ್ಯಕ್ಷರು
2. ಡಾ. ಸುಧಾಕರ್. ಹೆಚ್ – ಸದಸ್ಯರು
3. ಶ್ರೀ ಎಂ. ಉದಯಕುಮಾರ್ – ಸದಸ್ಯರು
4. ಪ್ರೊ. ವಿ.ವಿ. ಸುರೇಶ್ ಬಾಬು – ಸದಸ್ಯರು
5. ಶ್ರೀ ಹರೀಶ್ ನಾಯ್ಕ್ – ಸದಸ್ಯರು
6. ಡಾ. ಕೆ.ಎ. ಮಹೇಶ್ವರಯ್ಯ – ಸದಸ್ಯರು
7. ಶ್ರೀಮತಿ ಕ್ಷಮಾ ಕುಲಕರ್ಣಿ – ಸದಸ್ಯರು
8. ಶ್ರೀಮತಿ ಸಿ ತೇಜಸ್ವಿನಿ – ಸದಸ್ಯರು
9. ಪ್ರೊ. ಸಿ. ಶ್ರೀನಿವಾಸ್, ಕುಲಸಚಿವರು (ಮೌಲ್ಯಮಾಪನ) – ಸದಸ್ಯರು
10. ಶ್ರೀ ಅಜಿತ್ ಕುಮಾರ್ ಹೆಗ್ಡೆ, ವಿತ್ತಾಧಿಕಾರಿಯವರು – ವಿಶೇಷ ಆಹ್ವಾನಿತರು
11. ಶ್ರೀ. ಎನ್. ಮಹೇಶ್ ಬಾಬು, ಕೆ.ಎ.ಎಸ್. ಕುಲಸಚಿವರು – ಸದಸ್ಯ ಕಾರ್ಯದರ್ಶಿ

ಎರಡು ನಿಮಿಷ ಪ್ರಾರ್ಥನೆಯ ನಂತರ ಸಭೆ ಪ್ರಾರಂಭವಾಯಿತು.

ಕುಲಸಚಿವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿ ಸಭೆಯನ್ನು ನಡೆಸಿಕೊಡಬೇಕೆಂದು ಸಭಾಧ್ಯಕ್ಷರನ್ನು ಕೋರಿದರು.

ಕುಲಪತಿಗಳು ಸದಸ್ಯರೆಲ್ಲರಿಗೂ ಮತ್ತೊಮ್ಮೆ ಸ್ವಾಗತ ಕೋರಿ ಕಾರ್ಯಸೂಚಿಯನ್ನು ಚರ್ಚೆಗೆ ತೆಗೆದುಕೊಂಡರು.

*Proceedings of the Special meeting of the Syndicate held on 21.03.2023*

**Item No. 01** : Nomination of three experts in the subject and/or allied subjects to the faculty of Commerce, Bangalore University, Bangalore for re-constitution of the Faculty-reg.

***Resolution**:*

The Syndicate resolved to obtain biodata and other details of the Experts named in the agenda note to enable to nominate three experts on the faculty of Commerce, Bangalore University, Bangalore.

*Proceedings of the Special meeting of the Syndicate held on 21.03.2023*

**ವಿಷಯ ಸಂಖ್ಯೆ 02:** ಬೆಂಗಳೂರು ವಿಶ್ವವಿದ್ಯಾಲಯದ 57ನೇ ಮಿನಿ ಘಟಿಕೋತ್ಸವದಲ್ಲಿ (ಉಪಸ್ಥಿತರಿರದ) ವಿವಿಧ ಪದವಿಗಳಿಗೆ ಅರ್ಹರಾದ ಅಭ್ಯರ್ಥಿಗಳ ಪಟ್ಟಿ ಹಾಗೂ ಪದವಿಗಳನ್ನು ಸ್ವೀಕರಿಸಲಿರುವ ಅಭ್ಯರ್ಥಿಗಳ ಪಟ್ಟಿಗಳನ್ನು ಅನುಮೋದಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ಬೆಂಗಳೂರು ವಿಶ್ವವಿದ್ಯಾಲಯದ 57ನೇ ಮಿನಿ ಘಟಿಕೋತ್ಸವದಲ್ಲಿ (ಉಪಸ್ಥಿತರಿರದ) ವಿವಿಧ ಪದವಿಗಳಿಗೆ ಅರ್ಹರಾದ ಅಭ್ಯರ್ಥಿಗಳ ಪಟ್ಟಿ ಹಾಗೂ ಪದವಿಗಳನ್ನು ಸ್ವೀಕರಿಸಲಿರುವ ಅಭ್ಯರ್ಥಿಗಳ ಪಟ್ಟಿಗಳನ್ನು ವಿಶ್ವವಿದ್ಯಾಲಯದ ಪರಿನಿಯಮಾವಳಿ ಅಧ್ಯಾಯ 15 ಪರಿಚ್ಛೇದ 15.1ರ ಪ್ರಕಾರ ಅಭ್ಯರ್ಥಿಗಳ ಪಟ್ಟಿಗಳನ್ನು ಪರಿಗಣಿಸಿ ಅನುಮೋದಿಸಿತು.

ಮುಂದುವರೆದು, ಶ್ರೀ ನಾರಾಯಣಗೌಡ, ಪಿ.ಹೆಚ್.ಡಿ. ಅಭ್ಯರ್ಥಿ ಇವರ ಹೆಸರನ್ನು ಮಿನಿ ಘಟಿಕೋತ್ಸವದ ಪಟ್ಟಿಯಿಂದ ಕೈಬಿಡಲು ಹಾಗೂ ಮುಂಬರುವ ವಾರ್ಷಿಕ ಘಟಿಕೋತ್ಸವದ ಪಟ್ಟಿಯಲ್ಲಿ ನಮೂದಿಸಿ ಸಿಂಡಿಕೇಟ್ ಅನುಮೋದನೆ ಪಡೆಯಲು ಸೂಚಿಸಿತು.

*Proceedings of the Special meeting of the Syndicate held on 21.03.2023*

**ವಿಷಯ ಸಂಖ್ಯೆ 03:** 2022-23ನೇ ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜುಗಳ ಹಾಗೂ 2023-24 ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಪರಿಶೀಲನೆಗೆ ಹಾಗೂ ಅನುಮೋದಿಸುವ ಬಗ್ಗೆ.

ಪ್ರೊ. ವಿ.ವಿ. ಸುರೇಶ್ ಬಾಬು ಅವರು ಮಾತನಾಡಿ, ರಸಾಯನಶಾಸ್ತ್ರ ವಿಭಾಗಕ್ಕೆ 2023-24ನೇ ಸಾಲಿಗೆ ಮೀಸಲಿರಿಸಿರುವ ಅನುದಾನವು ಬಹಳ ಕಡಿಮೆಯಾಗಿರುತ್ತದೆ. ಹೊಸದಾಗಿ ವಿಭಾಗದ ಅಧ್ಯಕ್ಷರಾಗಿ ನೇಮಕಗೊಂಡಿರುವ ಪ್ರಾಧ್ಯಾಪಕರು ಪ್ರಸಕ್ತ ಸಾಲಿನ ಅನುದಾನವನ್ನು ಕಾರಣಾಂತರಗಳಿಂದ ಪೂರ್ಣವಾಗಿ ಉಪಯೋಗಿಸದಿಲ್ಲದೇ ಇರಬಹುದು. ಸದರಿ ವಿಭಾಗವು ಸೆಂಟ್ರಲ್ ಕಾಲೇಜು ಆವರಣದಿಂದ ಸ್ಥಳಾಂತರಗೊಂಡು ಹೊಸದಾಗಿ ಸ್ಥಾಪನೆಯಾಗಿರುವ ಕಾರಣ ಹೆಚ್ಚಿನ ಸೌಲಭ್ಯಗಳನ್ನು ಒದಗಿಸುವ ಅವಶ್ಯಕತೆ ಇದೆ. ಆದಕಾರಣ ಮುಂದಿನ ಶೈಕ್ಷಣಿಕ ಸಾಲಿಗೆ ನಮೂದಿಸಿರುವ ಅನುದಾನಕ್ಕಿಂತ ಹೆಚ್ಚಿಗೆ ಅನುದಾನವನ್ನು ಒದಗಿಸಿಕೊಡಬೇಕೆಂದು ಕೋರಿದರು.

ಅವರು ಮುಂದುವರೆದು, ವಿಶ್ವವಿದ್ಯಾಲಯದ ಸಂಶೋಧನಾ ಕಾರ್ಯಗಳಿಗೆ ಕಾಯ್ದಿರಿಸಿರುವ Seed Money ಅನ್ನು ಹೆಚ್ಚಿಗೆ ಮಾಡಬೇಕೆಂದು ತಿಳಿಸಿದರು.

ವಿತ್ತಾಧಿಕಾರಿಗಳು ಮಾತನಾಡಿ 2023-24ನೇ ಸಾಲಿನ ಬೆಂಗಳೂರು ವಿಶ್ವವಿದ್ಯಾಲಯದ ಆಯ-ವ್ಯಯವನ್ನು ಅಗತ್ಯತೆಯನುಸಾರ ಹಾಗೂ ವಾಸ್ಥವಿಕ ಚಿತ್ರಣದ ಆಧಾರದ ಮೇಲೆ ಸಿದ್ದಪಡಿಸಲಾಗಿದೆ. ರಸಾಯನಶಾಸ್ತ್ರ ವಿಭಾಗದಲ್ಲಿ 2022-23ನೇ ಸಾಲಿಗೆ ಕಾಯ್ದಿರಿಸಿದ್ದ ಮೊತ್ತದಲ್ಲಿ ಬಳಕೆಯಾಗಿರುವ ಅನುದಾನದ ಪ್ರಮಾಣದ ಆಧಾರದ ಮೇಲೆ ಮುಂದಿನ ಶೈಕ್ಷಣಿಕ ಸಾಲಿಗೆ ಅನುದಾನವನ್ನು ಒದಗಿಸಲಾಗಿದೆ. ಒಂದು ವೇಳೆ ಮೀಸಲಿರಿಸಿದ ಅನುದಾನ ಸಾಕಾಗದಿದ್ದರೆ ಅಂತಹ ಸಮಯದಲ್ಲಿ ಪುನರ್-ವಿನಿಯೋಗದ ಮೂಲಕ ವೆಚ್ಚಗಳನ್ನು ಭರಿಸಲಾಗುವುದು ಹಾಗೂ ವಿಶ್ವವಿದ್ಯಾಲಯದ ಸಂಶೋಧನಾ ಕಾರ್ಯಗಳಿಗೆ Seed Money ಅನ್ನು ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲದಿಂದ ಬಳಕೆಯ ಆಧಾರದ ಮೇಲೆ ಪುನರ್-ವಿನಿಯೋಗದ ಮೂಲಕ ಅನುದಾನ ಒದಗಿಸಲು ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು.

**ನಿರ್ಣಯ:**

ಮೇಲ್ಕಂಡ ಚರ್ಚೆಯೊಂದಿಗೆ, 2022-23ನೇ ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜುಗಳ ಹಾಗೂ 2023-24 ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಕೆ.ಎಸ್.ಯು. ಅಧಿನಿಯಮ 2000ದ ಪ್ರಕರಣ 32(3)(ii) ಮತ್ತು 48(i)ರ ಅನ್ವಯ ಸಿಂಡಿಕೇಟ್ ಅನುಮೋದಿಸಿತು.

***Proceedings of the Special meeting of the Syndicate held on 21.03.2023***

**Item No. 04**: Approval for collaboration between Bangalore University and Kanazawa University, Japan and having MoU-reg.

The Vice-Chancellor informed the Syndicate that Kanazawa University is one of the oldest Universities in Japan and it has come forward to associate with Bangalore University for research collaboration. There is a provision for exchange of students and faculty under this programme. He requested to approve the MoU as there is no financial commitment on the part of the University.

***Resolution:***

After detailed discussions, the Syndicate resolved to approve the MoU between Bangalore University and Kanazawa University, Japan.

h' 21/3/23

Further, the Syndicate directed to keep the records of all the MoUs entered into other organizations by the Bangalore University in digital and book form.



**Item No. 05**: Memorandum of Understanding between Naandi Foundation, Hyderabad (Mahindra Pride Classroom Program) and Bangalore University, Bengaluru -reg.

***Resolution:***

After detailed discussions, the Syndicate resolved to approve the Memorandum of Understanding between Naandi Foundation, Hyderabad (Mahindra Pride Classroom Program) and Bangalore University, Bengaluru and resolved to make corrections for clause VII. GENERAL TERMS v. Dispute Resolution: i.e., "...arbitration shall be at Bengaluru" instead of "...arbitration shall be at Hyderabad"



**Item No. 06:** Printing & supply of marks cards/degree certificates/rank certificates/gold medal certificates to the Examination branch, Bangalore University, Bengaluru.

The Registrar (Evaluation) briefed the Syndicate that the students of 2019 batch and onwards have not been issued printed certificate of marks cards and degree certificates as these certificates are uploaded and made available through National Academic Depository Portal, as per the directions of the State Government. However, many students are pressing for issue of their hard copies of the original marks cards by stating that the embassies/employers are not accepting the certificates available at Digilocker. Further, the Special Secretary to Governor vide letter No. GS 19 GUM 2022 dated: 27-12-2022 has directed the Universities to issue hard copy of the marks cards and other certificates with security features along with the uploading of the marks cards and certificates in NAAD. Hence, the subject is placed before the Syndicate to invite Tenders for procurement of blank marks cards/certificates.

Mr. Udaya Kumar M, expressed that the Syndicate in its earlier meetings resolved to issue non-tearable marks cards and degree certificates to the students. It

is the privilege of the students to get hard copy of the certificates as they are paying for the said certificates. He insisted to procure non-tearable marks cards and degree certificates to maintain standard on account of globalization.

The Vice-Chancellor informed that there is no dispute in giving hard copy of the marks cards and other certificates. However, in view of the cost of certificates, it is advisable to procure a tearable marks cards/certificates as the details of the marks cards/certificates are being uploaded in the National Academic Depositor (NAAD)-Digilocker.

***Resolution:***

After detailed discussions, the Syndicate resolved to procure required number of tearable blank marks cards / degree certificates through fresh Tender process.



**Item No. 07:** Financial support to file patent from the Dept. of Microbiology and Biotechnology, BUB.

Prof. V V Suresh Babu opined that instead of extending financial support to individual proposal for filing patents, a policy decision may be taken for extending financial assistance for filing patents by the faculty members of all the departments.

The Vice-Chancellor suggested for re-imbursement expenditure incurred by the faculty members in obtaining patents.

***Resolution:***

After detailed discussions, the Syndicate resolved to approve the proposal for sanctioning of financial assistance of Rs:55,700/- (Fifty five thousand seven hundred only) to Dr. Srinivas C, Professor, Dept. of Microbiology and Biotechnology to file patent of their research work entitled "Novel ellagic acid and method of extraction and purification thereof" and ratified the University order of even no. dated: 22-02-2023.

Further, the Syndicate directed to prepare a draft policy for re-imbursement of expenditure to be incurred towards obtaining patents for the research work by the faculty.

21/3/23

*Proceedings of the Special meeting of the Syndicate held on 21.03.2023*

**Item No. 08:** To consider the recommendation of the committee constituted for extension of MoU for M.Sc. in Biotechnology and Bio-informatics and recognition for M.Sc course in Big Data biology.

***Resolution:***

After detailed discussions, the Syndicate resolved to consider the recommendation of the Expert Committee constituted for extension of MoU for M.Sc. in Biotechnology and Bio-informatics and recognition for M.Sc Course in Big Data Biology and Ph.D programme u/s 66 of the K.S.U. Act, 2000.

*Proceedings of the Special meeting of the Syndicate held on 21.03.2023*

**ವಿಷಯ ಸೂಚಿ 09:** ಶ್ರೀ ಜಿ.ಎಲ್. ಶಿವಕುಮಾರ್, ಕಿರಿಯ ಸಹಾಯಕರು ಇವರ ಮೇಲೆ ಶಿಸ್ತು ಕ್ರಮ ಜರುಗಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ದಿನಾಂಕ; 24-1-2023ರ ಸಿಂಡಿಕೇಟ್ ಸಭೆಯಲ್ಲಿ ಈಗಾಗಲೇ ತಪ್ಪಿತಸ್ಥ ಸಿಬ್ಬಂದಿಯಾದ ಶ್ರೀ ಜಿ.ಎಲ್. ಶಿವಕುಮಾರ್, ಕಿರಿಯ ಸಹಾಯಕರು ಇವರ ಮೇಲೆ ಶಿಸ್ತು ಕ್ರಮ ಕೈಗೊಳ್ಳಲು ಕಾನೂನು ಸಲಹೆಗಾರ ಸ್ಪಷ್ಟ ಅಭಿಪ್ರಾಯವನ್ನು ಪಡೆದುಕೊಂಡು ಸಿಂಡಿಕೇಟ್ ಸಭೆಗೆ ಮಂಡಿಸಬೇಕೆಂದು ಸೂಚಿಸಿರುವುದರಿಂದ ಹಾಗೂ ಉಪ ಲೋಕಾಯುಕ್ತ-1, ಕರ್ನಾಟಕ ಸರ್ಕಾರ ಇವರ ಶಿಫಾರಸ್ಸಿನನ್ವಯ ಮತ್ತು ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರ ಅಭಿಪ್ರಾಯದನ್ವಯ ಇವರಿಗೆ ಕಡ್ಡಾಯ ನಿವೃತ್ತಿ ಶಿಕ್ಷೆ ವಿಧಿಸಲು ಸಿಂಡಿಕೇಟ್ ನಿರ್ಣಯಿಸಿತು.

*Proceedings of the Special meeting of the Syndicate held on 21.03.2023*

**ವಿಷಯ ಸಂಖ್ಯೆ 10** ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದ ಮಲ್ಲತ್ತಹಳ್ಳಿ ಗ್ರಾಮದ ರೀ.ಸ.ನಂ. 30 (ಹೊಸ ನಂ. 166), 31 (ಹೊಸ ನಂ 117) ಹಾಗೂ 32 ಹ (ರೀ.ಸ.ನಂ 118) ರಲ್ಲಿ ಇರುವ ಕೆಂಗುಂಟೆ ಸರ್ಕಲ್ ಜಾಗದಲ್ಲಿ ಬಿಬಿಎಂಪಿ ರವರು ಅಂಡರ್‌ಪಾಸ್ ಹಾಗೂ ಫ್ಲೈ ಓವರ್ ನಿರ್ಮಿಸಲು ಜಮೀನು ಕೋರಿರುವ ಕುರಿತು.

ಕುಲಸಚಿವರು ಮಾತನಾಡಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಕೆಂಗುಂಟೆ ಸರ್ಕಲ್ ನಲ್ಲಿ ಗ್ರೇಡ್ ಸೆಪರೇಟರ್ ನಿರ್ಮಿಸಲು, ವಿಶ್ವವಿದ್ಯಾಲಯದ ಸುಪರ್ದಿಗೆ ಒಳಪಟ್ಟ ಮಲ್ಲತ್ತಹಳ್ಳಿ ಗ್ರಾಮದ ರೀ.ಸ.ನಂ. 30 (ಹೊಸ ನಂ. 166), 31 (ಹೊಸ ನಂ 117) ಹಾಗೂ 32 ಹ (ರೀ.ಸ.ನಂ 118) ರಲ್ಲಿರುವ 5925.47 ಚ.ಮೀ. ಅಂದರೆ 1.5 ಎಕರೆ ಜಮೀನನ್ನು ನೀಡಲು ಕೋರಿದ್ದಾರೆ. ಈ ಬಗ್ಗೆ ಮಾನ್ಯ ಶ್ರೀ ಮುನಿರತ್ನರವರು, ತೋಟಗಾರಿಕೆ

ಮತ್ತು ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಹಾಗೂ ಕೋಲಾರ ಜಿಲ್ಲಾ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ, ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 31.01.2023ರಂದು ಸಭೆ ನಡೆದಿದ್ದು, ಸಭೆಯಲ್ಲಿ ಮಾನ್ಯ ಸಚಿವರು ವಿಶ್ವವಿದ್ಯಾಲಯಕ್ಕೆ ಸದರಿ ಜಾಗಕ್ಕೆ ಪರಿಹಾರವಾಗಿ ಬಿ.ಬಿ.ಎಂ.ಪಿ.ವತಿಯಿಂದ ವಿಶ್ವವಿದ್ಯಾಲಯದ ಜ್ಞಾನಭಾರತಿ ವಸತಿ ಸಮುಚ್ಚಯದ ಬಳಿಯಿರುವ ಉಲ್ಲಾಳು ಜಂಕ್ಷನ್ ಇಂದ ಮೈಸೂರು ರಸ್ತೆಗೆ ಜ್ಞಾನಭಾರತಿ ಆವರಣದ ಪರಿಧಿಯಲ್ಲಿ ಹೊಸದಾಗಿ ರಸ್ತೆ ನಿರ್ಮಿಸಿಕೊಡುವ ಬಗ್ಗೆ ಅಥವಾ ಆವರಣದ ಮುಖ್ಯ ರಸ್ತೆಯ ಎರಡೂ ಬದಿಯಲ್ಲಿ ಕಾಂಪೌಂಡ್ ನಿರ್ಮಿಸಿಕೊಡುವ ಬಗ್ಗೆ, ವೃಷಭಾವತಿ ನದಿಯ ಮೇಲಿರುವ ಸೇತುವೆಯನ್ನು ಪುನರ್ ನಿರ್ಮಿಸಿಕೊಡುವ ಬಗ್ಗೆ, ಹೆಚ್ಚುವರಿಯಾಗಿ ಹತ್ತು ವಸತಿ ಗೃಹಗಳು ಹಾಗೂ 25 ತರಗತಿ ಕೊಠಡಿಗಳುಳ್ಳ ಕಟ್ಟಡವನ್ನು ಸರ್ಕಾರದ/ಬಿ.ಬಿ.ಎಂ.ಪಿ.ವತಿಯಿಂದ ನಿರ್ಮಿಸಿಕೊಡುವುದಾಗಿ ಒಪ್ಪಿಗೆ ಸೂಚಿಸಿದ್ದಾರೆ. ಸರ್ಕಾರದ ಪತ್ರ ಸಂಖ್ಯೆ ಇಡಿ 33 ಯುಬಿವಿ 2023 ದಿನಾಂಕ: 13-03-2023ರಲ್ಲಿ ವಿಶ್ವವಿದ್ಯಾಲಯದ ಜಾಗ ಸರ್ವೆ ನಂ.30,31,32ರಲ್ಲಿನ 5925.47 ಚ.ಮೀ. ವಿಸ್ತೀರ್ಣದ ಜಮೀನನ್ನು ರಸ್ತೆ ನಿರ್ಮಿಸುವ ಉದ್ದೇಶಕ್ಕೆ ಬಳಸಿಕೊಳ್ಳಲು ಬಿ.ಬಿ.ಎಂ.ಪಿ.ಗೆ ಅನುಮತಿ ನೀಡಲು ಅನುಮೋದಿಸಿದೆ. ಆದಕಾರಣ, ಸರ್ಕಾರದ ಅನುಮೋದನೆಯನುಸಾರ ಬಿ.ಬಿ.ಎಂ.ಪಿ.ಗೆ ಸದರಿ ಜಾಗವನ್ನು ಮೇಲ್ಕಾಣಿಸಿದ ಕಾಮಗಾರಿಗಳನ್ನು ಬಿ.ಬಿ.ಎಂ.ಪಿ.ವತಿಯಿಂದ ನಡೆಸುವ ನಿಬಂಧನೆಗೊಳಪಟ್ಟು ಬಿಟ್ಟುಕೊಡಬಹುದಾಗಿದೆ ಎಂದು ತಿಳಿಸಿದರು.

ಶ್ರೀ ಉದಯ ಕುಮಾರ್ ಎಂ ಅವರು ಮಾತನಾಡಿ, ಮಾನ್ಯ ಮಂತ್ರಿಗಳು ವಿಶ್ವವಿದ್ಯಾಲಯಕ್ಕೆ ಭರವಸೆ ನೀಡಿದ್ದಾರೆ ಅಷ್ಟೆ. ಭರವಸೆ ಆಧಾರದ ಮೇಲೆ ಜಾಗ ಬಿಟ್ಟುಕೊಡುವುದು ಒಳಿತಲ್ಲವೆಂದು ತಿಳಿಸಿ, ಸಂಬಂದಪಟ್ಟ ಇಲಾಖೆಯಿಂದ ಲಿಖಿತ ರೂಪದಲ್ಲಿ ಈ ಬಗ್ಗೆ ಬರೆಸಿಕೊಳ್ಳುವುದು ಸರಿಯೆಂದು ತಿಳಿಸಿದರು.

ಕುಲಪತಿಗಳು ಮಾತನಾಡಿ, ಮೇಲ್ಕಂಡ ಷರತ್ತುಗಳನ್ನು ಹಾಕಿ ಜಾಗ ನೀಡಬಹುದಾಗಿದೆ ಎಂದು ತಿಳಿಸಿದರು.

**ನಿರ್ಣಯ:**

ದೀರ್ಘ ಚರ್ಚೆಯ ನಂತರ, ಒಳಾಂಗಣ ಕ್ರೀಡಾಂಗಣ, ಪ್ರಸ್ತುತ ವಿಶ್ವವಿದ್ಯಾಲಯದ ಮಧ್ಯಭಾಗದಲ್ಲಿ ಇರುವ ಮುಖ್ಯ ರಸ್ತೆಗೆ ಪರ್ಯಾಯವಾಗಿ ವಿಶ್ವವಿದ್ಯಾಲಯದ ಆವರಣದ ಪರಿಧಿಯಲ್ಲಿ ಬದಲಿ ರಸ್ತೆ ನಿರ್ಮಾಣ, ಹೆಚ್ಚುವರಿಯಾಗಿ 10 ವಸತಿ ಗೃಹಗಳು ಮತ್ತು 25 ತರಗತಿ ಕೊಠಡಿಗಳುಳ್ಳ ಶೈಕ್ಷಣಿಕ ಕಟ್ಟಡವನ್ನು ಬಿ.ಬಿ.ಎಂ.ಪಿ. ಅಥವಾ ಸರ್ಕಾರದಿಂದ ಕಟ್ಟಿಸಿಕೊಡುವ ಷರತ್ತಿಗೊಳಪಟ್ಟು, ಬಿ.ಬಿ.ಎಂ.ಪಿ. ಕೋರಿರುವ 5925.47 ಚ.ಮೀ. ವಿಸ್ತೀರ್ಣದ ಜಮೀನನ್ನು ನೀಡಲು ಸಿಂಡಿಕೇಟ್ ಅನುಮೋದಿಸಿತು.

ಮುಂದುವರೆದು, ಈ ಬಗ್ಗೆ ಕೂಡಲೇ ಸರ್ಕಾರ ಮತ್ತು ಬಿ.ಬಿ.ಎಂ.ಪಿ.ಗೆ ಪ್ರಸ್ತಾವನೆಯನ್ನು ಕಳುಹಿಸಿಕೊಡಲು ಸೂಚಿಸಿತು.

21/3/23

**Proceedings of the Special meeting of the Syndicate held on 21.03.2023**

**ವಿಷಯ ಸಂಖ್ಯೆ 11:** ಶ್ರೀ ಚಂದ್ರಶೇಖರಪ್ಪ, ಸಹಾಯಕರು, ವಿದ್ಯಾಕಾರ್ಯ ಶಾಖೆ-1 ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ಇವರಿಗೆ ಕಣ್ಣಿನ ಶಸ್ತ್ರ ಚಿಕಿತ್ಸೆಗಾಗಿ ಖರ್ಚು ಮಾಡಿರುವ ವೈದ್ಯಕೀಯ ವೆಚ್ಚವನ್ನು ಮರುಪಾವತಿಸುವ ಬಗ್ಗೆ.

ವಿತ್ತಾಧಿಕಾರಿಯವರು ಮಾತನಾಡಿ, ಹಿಂದಿನ ಸಿಂಡಿಕೇಟ್ ಸಭೆಯಲ್ಲಿ, ಅಧಿಕಾರಿಗಳಾದ ಡಾ. ಗೋವಿಂದರಾಜು ಇವರ ಪತ್ನಿಯ ವೈದ್ಯಕೀಯ ಚಿಕಿತ್ಸೆಗೆ ಭರಿಸಿರುವ ವೆಚ್ಚ ಹಾಗೂ ಮುಂದಿನ ಅವಧಿಯಲ್ಲಿ ವ್ಯಯ ಮಾಡಬಹುದಾದ ಮೊತ್ತದ ಪೂರ್ಣ ಮೊತ್ತವನ್ನು ಮರುಪಾವತಿ ಮಾಡಲು ನಿರ್ಣಯಿಸಿರುವುದು ಸರಿಯಾದ ಕ್ರಮವಲ್ಲ ಹಾಗೂ ಈಗ ಪ್ರಸ್ತಾಪಿಸಿರುವ ವೈದ್ಯಕೀಯ ವೆಚ್ಚ ಕುರಿತಂತೆ ಸರ್ಕಾರದ ನಿಯಮಾವಳಿಯನುಸಾರ ಪರಿಗಣಿಸಬೇಕಾಗುತ್ತದೆ. ಆದಕಾರಣ ಈ ವೈದ್ಯಕೀಯ ವೆಚ್ಚದ ಬಗ್ಗೆ ಸರ್ಕಾರಕ್ಕೆ ಪತ್ರ ಬರೆದು ಅನುಮೋದನೆ ಕೋರುವುದಾಗಿ ತಿಳಿಸಿದರು.

ಅವರು ಮುಂದುವರೆದು, ಆದಾಯ ಕಡಿಮೆ ಇರುವ ಕೆಳ ಹಂತದ ಹುದ್ದೆಗಳ ನೌಕರರ ವೈದ್ಯಕೀಯ ವೆಚ್ಚವನ್ನು ಮಾನವೀಯತೆಯ ಆಧಾರದ ಮೇಲೆ ಪರಿಗಣಿಸಬಹುದಾಗಿದೆ ಎಂದು ತಿಳಿಸಿದರು.

ಡಾ. ಸುಧಾಕರ ಹೆಚ್. ಅವರು ಮಾತನಾಡಿ, ಸರ್ಕಾರದ ಮಾರ್ಗಸೂಚಿಯನುಸಾರ ವೈದ್ಯಕೀಯ ವೆಚ್ಚದ ಮರುಪಾವತಿ ಪ್ರಸ್ತಾವನೆಗಳನ್ನು ಪರಿಗಣಿಸಬೇಕೆಂದು ತಿಳಿಸಿದರು.

**ನಿರ್ಣಯ:**

ದೀರ್ಘ ಚರ್ಚೆಯ ನಂತರ, ಶ್ರೀ ಚಂದ್ರಶೇಖರಪ್ಪ, ಸಹಾಯಕರು, ವಿದ್ಯಾಕಾರ್ಯ ಶಾಖೆ-1 ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ಇವರಿಗೆ ಕಣ್ಣಿನ ಶಸ್ತ್ರ ಚಿಕಿತ್ಸೆಗಾಗಿ ಖರ್ಚು ಮಾಡಿರುವ ವೈದ್ಯಕೀಯ ವೆಚ್ಚ ರೂ.35,850/-(ಮೂವತ್ತೈದು ಸಾವಿರದ ಎಂಟುನೂರ ಐವತ್ತು ರೂಪಾಯಿಗಳನ್ನು) ಮಾನವೀಯತೆ ಆಧಾರದ ಮೇಲೆ ಮರುಪಾವತಿ ಮಾಡಲು ಸಿಂಡಿಕೇಟ್ ಅನುಮೋದಿಸಿತು.

**Proceedings of the Special meeting of the Syndicate held on 21.03.2023**

**ವಿಷಯ ಸಂಖ್ಯೆ 12:** ಶ್ರೀ ವೆಂಕಟೇಶ್.ಎನ್, ಗ್ರೂಪ್ 'ಡಿ' (ಕಡ್ಡಾಯ ನಿವೃತ್ತಿ), ಇವರನ್ನು ವಿಶ್ವವಿದ್ಯಾಲಯವು ಕಡ್ಡಾಯ ನಿವೃತ್ತಿಗೊಳಿಸಿರುವುದನ್ನು ಹಿಂಪಡೆಯುವಂತೆ ಮನವಿ ಸಲ್ಲಿಸಿರುವ ಬಗ್ಗೆ.

ಶ್ರೀ ಉದಯ ಕುಮಾರ್ ಎಂ ಅವರು ಮಾತನಾಡಿ, ಸಿಂಡಿಕೇಟ್ ಈಗಾಗಲೇ ನಿಯಮಾನುಸಾರ ಪರಿಗಣಿಸಿ, ಶ್ರೀ ವೆಂಕಟೇಶ್.ಎನ್, ಗ್ರೂಪ್ 'ಡಿ' ಇವರಿಗೆ ಕಡ್ಡಾಯ ನಿವೃತ್ತಿ ಶಿಕ್ಷೆ ವಿಧಿಸಿರುವುದು ಸರಿಯಾಗಿದೆ. ಮತ್ತೊಮ್ಮೆ ಈ ವಿಷಯವನ್ನು ಸಿಂಡಿಕೇಟ್ ಮರುಪರಿಗಣನೆಗೆ ಮಂಡಿಸಿರುವುದು ಸರಿಯಾದ ಕ್ರಮವಲ್ಲವೆಂದರು.

**ನಿರ್ಣಯ:**

ದೀರ್ಘ ಚರ್ಚೆಯ ನಂತರ, ದಿನಾಂಕ:17-08-2022ರ ಸಿಂಡಿಕೇಟ್ ಸಭೆಯಲ್ಲಿ ಶ್ರೀ ವೆಂಕಟೇಶ್.ಎನ್, ಗ್ರೂಪ್ 'ಡಿ' ನೌಕರರು ಪ್ರಾಣಿಶಾಸ್ತ್ರ ವಿಭಾಗ ಇವರು ದೀರ್ಘ ಕಾಲ ಅನಧಿಕೃತ ಗೈರುಹಾಜರಿ ಸಂಬಂಧ ದೋಷಾರೋಪ ಹಾಗೂ ಕರ್ತವ್ಯ ನಿರ್ವಹಿಸುವಲ್ಲಿ ಶ್ರದ್ಧೆ, ದೃಢತೆ ಹಾಗೂ ವಿಶ್ವಾಸ ಇಲ್ಲದಿರುವುದು ವಿಚಾರಣಾಧಿಕಾರಿಯವರ ವರದಿಯ ಪ್ರಕಾರ ಸಾಬೀತಾಗಿರುವುದರಿಂದ ಇವರಿಗೆ ವಿಧಿಸಿರುವ ಕಡ್ಡಾಯ ನಿವೃತ್ತಿ ಶಿಕ್ಷೆಯು ಸರಿಯಾಗಿದೆ ಎಂದು ಸಿಂಡಿಕೇಟ್ ತಿಳಿಸಿ ಅವರ ಮನವಿಯನ್ನು ತಿರಸ್ಕರಿಸಿತು.



**ವಿಷಯ ಸಂಖ್ಯೆ: 13:** ಡಾ. ನೀಮಾ ಜ್ಞಾನದೇವ್, ಸಹ ಪ್ರಾಧ್ಯಾಪಕರು, ಗ್ರಾಮೀಣಾಭಿವೃದ್ಧಿ ವಿಭಾಗ, ಇವರ ನೇಮಕಾತಿಯನ್ನು ರದ್ದುಗೊಳಿಸಿ ಕರ್ತವ್ಯದಿಂದ ಬಿಡುಗಡೆ ಮಾಡಿರುವ ವಿಷಯವನ್ನು ಸಿಂಡಿಕೇಟ್ ಸಭೆಗೆ ಅನುಸಮರ್ಥನೆಗೆ ಮಂಡಿಸುವ ಬಗ್ಗೆ.

ಡಾ. ಸುಧಾಕರ ಹೆಚ್ ಅವರು ಮಾತನಾಡಿ, ಡಾ. ನೀಮಾ ಜ್ಞಾನದೇವ್ ಅವರು ವಿಶೇಷ ನೇಮಕಾತಿ ಪ್ರಕ್ರಿಯೆಯಲ್ಲಿ ನೇಮಕಗೊಂಡಿದ್ದು, ವಿಶ್ವವಿದ್ಯಾಲಯವು ಷರತ್ತುಬದ್ಧ ಆದೇಶವನ್ನು ನೀಡಿದೆ ಹಾಗೂ ಅವರನ್ನು ಗ್ರಾಮೀಣಾಭಿವೃದ್ಧಿ ವಿಭಾಗದ ನಿರ್ದೇಶಕರನ್ನಾಗಿಯೂ ಸಹ ನೇಮಕ ಮಾಡಿರುತ್ತಾರೆ. ಸಿಂಧುತ್ವ ಪ್ರಮಾಣ ಪತ್ರ ಪಡೆದುಕೊಳ್ಳುವಲ್ಲಿ ಅಭ್ಯರ್ಥಿಯ ಜೊತೆಗೆ ವಿಶ್ವವಿದ್ಯಾಲಯದ ಜವಾಬ್ದಾರಿಯೂ ಕೂಡ ಇರುತ್ತದೆ. ಆದ್ದರಿಂದ ಸದರಿ ವಿಷಯವನ್ನು ನೇಮಕಾತಿ ಪ್ರಾಧಿಕಾರವಾದ ಸಿಂಡಿಕೇಟ್ ಸಭೆಯ ಗಮನಕ್ಕೆ ತಂದು ನಂತರ ಅವರನ್ನು ಸೇವೆಯಿಂದ ಬಿಡುಗಡೆ ಮಾಡುವ ಬಗ್ಗೆ ಕ್ರಮ ಕೈಗೊಳ್ಳಬೇಕಾಗಿತ್ತೆಂದು ತಿಳಿಸಿದರು. ಅವರು ಮುಂದುವರೆದು, ಮೇಲ್ಕಂಡ ಶಿಕ್ಷಕರಿಗೆ ಇಲ್ಲಿಯವರೆಗೂ ನೀಡಿರುವ ವೇತನವನ್ನು ಹಿಂಪಡೆಯುವ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರೆಂದು ತಿಳಿಸಿದರು.

ಶ್ರೀ ಉದಯ ಕುಮಾರ್ ಎಂ ಅವರು ಮಾತನಾಡಿ ನೇಮಕಾತಿ ಹಾಗೂ ಇತರ ವಿಷಯಗಳಿಗೆ ಸಂಬಂಧಿಸಿದಂತೆ ಮಾನ್ಯ ಉಚ್ಚನ್ಯಾಯಾಲಯದಲ್ಲಿ ದಾಖಲಾಗುವ ಅರ್ಜಿ ಹಾಗೂ ಪ್ರಕರಣಗಳ ಬೆಳವಣಿಗೆ ಬಗ್ಗೆ ಸಿಂಡಿಕೇಟ್ ಗಮನಕ್ಕೆ ತರಬೇಕೆಂದು ಕೋರಿದರು.

ಕುಲಸಚಿವರು ಮಾತನಾಡಿ, ಡಾ. ನೀಮಾ ಜ್ಞಾನದೇವ್ ಅವರು ದಿನಾಂಕ: 27-12-2019ರಂದು ಬ್ಯಾಕ್‌ಲಾಗ್ ಹುದ್ದೆಯಡಿ ನೇಮಕ ಹೊಂದಿದ್ದು ಸಹಾಯಕ ಪ್ರಾಧ್ಯಾಪಕರಾಗಿ ದಿನಾಂಕ: 10-01-2020ರಂದು ಕರ್ತವ್ಯಕ್ಕೆ ಹಾಜರಾಗಿದ್ದು, ಇಲ್ಲಿಯವರೆಗೂ ಅವರು ಸಲ್ಲಿಸಿದ್ದ ಜಾತಿ ಪ್ರಮಾಣ ಪತ್ರದ ನೈಜತೆಯ ದೃಢೀಕರಣ ಮತ್ತು ಸಿಂಧುತ್ವ ಪ್ರಮಾಣ ಪತ್ರವನ್ನು ಸಲ್ಲಿಸಿರುವುದಿಲ್ಲ. ಅವರಿಗೆ ಎರಡು ಬಾರಿ ನೋಟೀಸ್ ನೀಡಲಾಗಿದೆ. ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಹಾಗೂ ತಹಶಿಲ್ದಾರ್ ಅವರಿಗೂ ಪತ್ರ ಬರೆಯಲಾಗಿತ್ತು. ಮೂರು ವರ್ಷಗಳು

ಕಳೆದರೂ ಸಿಂಧುತ್ವ ಪ್ರಮಾಣ ಪತ್ರ ಸಲ್ಲಿಸದ ಕಾರಣ ಅವರನ್ನು ಸೇವೆಯಿಂದ ಬಿಡುಗಡೆಗೊಳಿಸಲಾಗಿದೆ. ಸಿಂಧುತ್ವ ಪ್ರಮಾಣ ಪತ್ರ ಪಡೆಯದೆ ಅವರನ್ನು ಸೇವೆಗೆ ನೇಮಕ ಮಾಡಿ ಆದೇಶ ಹೊರಡಿಸಿರುವುದು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯನುಸಾರ ಸರಿಯಾದ ಕ್ರಮವಲ್ಲವೆಂದು ತಿಳಿಸಿದರು. ಸಿಂಧುತ್ವ ಪ್ರಮಾಣ ಪತ್ರ ಪಡೆಯದೆ ನೇಮಕಾತಿ ಆದೇಶ ಹೊರಡಿಸಿರುವವರ ವಿರುದ್ಧ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ತಿಳಿಸಿದರು. ಅವರು ಮುಂದುವರೆದು ಈಗಾಗಲೇ ಕೆಲಸ ನಿರ್ವಹಿಸಿರುವುದರಿಂದ ಆ ಅವಧಿಯ ವೇತನವನ್ನು ವಸೂಲಾತಿ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ತಿಳಿಸಿದರು.

ಕುಲಪತಿಗಳು ಮಾತನಾಡಿ, ಜಾತಿ ಪ್ರಮಾಣ ಪತ್ರದ ನೈಜತೆಯ ಧೃಢೀಕರಣ ಪತ್ರ ಹಾಗೂ ಸಿಂಧುತ್ವ ಪ್ರಮಾಣ ಪತ್ರ ಪಡೆಯದೆ ಬ್ಯಾಕ್-ಲಾಗ್ ಹುದ್ದೆಯಡಿಯಲ್ಲಿ ನೇಮಕಗೊಂಡ ಶಿಕ್ಷಕರಿಗೆ ನೇಮಕಾತಿ ಆದೇಶ ಹೊರಡಿಸಿರುವುದು ನಿಯಮಾನುಸಾರ ಸರಿಯಾದ ಕ್ರಮವಲ್ಲವೆಂದು ಅಭಿಪ್ರಾಯಪಟ್ಟರು.

**ನಿರ್ಣಯ:**

ದೀರ್ಘ ಚರ್ಚೆಯ ನಂತರ, ಡಾ. ನೀಮಾ ಜ್ಞಾನದೇವ್, ಸಹ ಪ್ರಾಧ್ಯಾಪಕರು, ಗ್ರಾಮೀಣಾಭಿವೃದ್ಧಿ ವಿಭಾಗ, ಇವರ ನೇಮಕಾತಿಯನ್ನು ರದ್ದುಗೊಳಿಸಿ ಕರ್ತವ್ಯದಿಂದ ಬಿಡುಗಡೆ ಮಾಡಿರುವ ವಿಷಯವನ್ನು ಸಿಂಡಿಕೇಟ್ ಅನುಸಮರ್ಥಿಸಿ, ಜಾತಿ ಪ್ರಮಾಣ ಪತ್ರದ ನೈಜತೆಯ ದೃಢೀಕರಣ ಹಾಗೂ ಸಿಂಧುತ್ವ ಪ್ರಮಾಣ ಪತ್ರ ಪಡೆಯದೇ ನೇಮಕಾತಿ ಆದೇಶ ಹೊರಡಿಸಿರುವವರ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಲು ಸರ್ಕಾರಕ್ಕೆ ಪತ್ರ ಬರೆಯಲು ನಿರ್ಣಯಿಸಲಾಯಿತು.



**ವಿಷಯ ಸಂಖ್ಯೆ: 14:** ಬೆಂಗಳೂರು ವಿಶ್ವವಿದ್ಯಾಲಯ ಪ್ರಸಾರಾಂಗದ ರಾಷ್ಟ್ರೀಯ ಶಿಕ್ಷಣ ನೀತಿ 2020 ರ ಅನುಸಾರ ಸ್ನಾತಕ ಪದವಿಯ ವಿವಿಧ ಪಠ್ಯಪುಸ್ತಕಗಳನ್ನು ರಚಿಸಿರುವ ಲೇಖಕರಿಗೆ /ಸಂಪಾದಕರಿಗೆ ಗೌರವ ಸಂಭಾವನೆ ಡಿ.ಟಿ.ಪಿ ವೆಚ್ಚ ಪರಿಷ್ಕರಿಸಿ ಹೆಚ್ಚಿಸಿರುವ ಬಗ್ಗೆ ಮತ್ತು ಹಳೆಯ ಪುಸ್ತಕಗಳಿಗೆ ರಿಯಾಯಿತಿ ನೀಡುವ ಬಗ್ಗೆ.

**ನಿರ್ಣಯ:**

ದೀರ್ಘ ಚರ್ಚೆಯ ನಂತರ, ದಿನಾಂಕ: 13-12-2022ರ ಪ್ರಸಾರಾಂಗ ಸಲಹಾ ಸಮಿತಿಯ ಶಿಫಾರಸ್ಸಿನನ್ವಯ ವಿವಿಧ ಪಠ್ಯ ಪುಸ್ತಕಗಳನ್ನು ಸಿದ್ದಪಡಿಸುವ ಶಿಕ್ಷಕರಿಗೆ ಗೌರವ ಸಂಭಾವನೆಯಾಗಿ ರೂ.6,000/-ಗಳ ಬದಲಾಗಿ ರೂ.8,000/-ಗಳನ್ನು ನಿಗದಿಪಡಿಸಲು ಹಾಗೂ ಪ್ರಸಾರಾಂಗ ಸಲಹಾ ಸಮಿತಿಯಲ್ಲಿ ದಿನಾಂಕ: 13-12-2022ರಲ್ಲಿ ಶಿಫಾರಸ್ಸಾದ ಇತರ ಕೆಳಕಂಡ ದರಗಳನ್ನು ಸಿಂಡಿಕೇಟ್ ಅನುಮೋದಿಸಿತು.

| ಕ್ರ.ಸಂ. | ವಿವರ | | ಹಾಲಿ ಇರುವ ದರ | ಪರಿಷ್ಕೃತ ದರ |
|---|---|---|---|---|
| 1. | ಒಂದು ಪುಸ್ತಕಕ್ಕೆ | ಗೌರವ ಸಂಭಾವನೆ | ರೂ.3000 | ರೂ.6000 |
| 2. | ಲೇಖಕರಿಗೆ | ಮುಖ ಬೆಲೆಯ ಮೇಲೆ | ರೂ.15% | ರೂ.15% |

| | | | | |
|---|---|---|---|---|
| 3. | ಒಂದು ಪುಟಕ್ಕೆ | ಡಿ.ಟಿ.ಪಿ. ವೆಚ್ಚ | ರೂ.30 | ರೂ.40 |
| 4. | ವಿವಿಧ ಲೇಖನಗಳನ್ನು ಆಯ್ದು ಸಂಕಲಿಸಿರುವ ಕೃತಿಯ ಸಂಪಾದಕರಿಗೆ | ಆ. ಲೇಖನಕ್ಕೆ | ರೂ.300 | ರೂ.1000 |
| | | ಆ. ಪ್ರತಿ ಕವಿತೆಗೆ | ರೂ.200 | ರೂ.500 |
| 5. | ಅನುವಾದಕರಿಗೆ | ಅ. ಪ್ರತಿ ಮೂಲದ ಕೃತಿಯಲ್ಲಿನ 1000 ಪದಗಳ ಅನುವಾದಕ್ಕೆ | ರೂ.100 | ರೂ.100 |
| | | ಆ. ಭಾಷಾ ಪರಿಶೀಲಕರಿಗೆ 1 ಪುಟಕ್ಕೆ | ರೂ.05 | ರೂ.06 |
| 6. | ಇತರೆ ಪುಸ್ತಕಗಳಿಗೆ | ಲೇಖಕರಿಗೆ ಮುಖ ಬೆಲೆಯ ಮೇಲೆ | ರೂ.15% | ರೂ.10% |
| | | ಸಂಪಾದಿತ ಕೃತಿಗಳ ಸಂಪಾದಕರಿಗೆ | ರೂ.250 | ರೂ.1000 |
| 7. | ಕರಡು ತಿದ್ದುವವರಿಗೆ | ಫುಲ್ ಸ್ಕೇಪ್ 1/8, 1 ಪುಟಕ್ಕೆ | ರೂ.02 | ರೂ.03 |
| | | ಕ್ರೌನ್ 1/8, 1 ಪುಟಕ್ಕೆ | ರೂ.03 | ರೂ.04 |
| | | ಡಮ್ಮಿ 1/8, 1 ಪುಟಕ್ಕೆ | ರೂ.04 | ರೂ.05 |
| | | ಕ್ರೌನ್ 1/4, 1 ಪುಟಕ್ಕೆ | ರೂ.05 | ರೂ.06 |
| | | ಡಮ್ಮಿ 1/4, 1 ಪುಟಕ್ಕೆ | ರೂ.05 | ರೂ.07 |
| 8. | ಉಪನ್ಯಾಸಕರಿಗೆ | ಪ್ರಚಾರೋಪನ್ಯಾಸ ಮಾಲೆ (ಉಪನ್ಯಾಸಕ್ಕೆ) | ರೂ.250 | ರೂ.1000 |
| | | ವಿಶೇಷ ಉಪನ್ಯಾಸ ಮಾಲೆ | ರೂ.250 | ರೂ.2000 |
| | | ದತ್ತಿ ಉಪನ್ಯಾಸ ಮಾಲೆ | ದತ್ತಿಯ ನಿಯಮದಂತೆ | |

ಮುಂದುವರೆದು, ಬೆಂಗಳೂರು ವಿಶ್ವವಿದ್ಯಾಲಯದ ಅನುಮತಿ ಪಡೆಯದೆ ಪ್ರಸಾರಾಂಗ ಪುಸ್ತಕಗಳನ್ನು ಮರು–ಮಾರಾಟ ಮಾಡಿರುವ ಬಗ್ಗೆ, ಈಗಾಗಲೇ ತೆಗೆದುಕೊಂಡ ತೀರ್ಮಾನದಂತೆ, ಮೆ. ಸ್ವಪ್ನ ಬುಕ್ ಹೌಸ್ ಮಾಲೀಕರು ಇನ್ನೂ ದರ ಪಾವತಿ ಮಾಡದಿರುವ ಬಗ್ಗೆ ನೋಟೀಸ್ ಜಾರಿ ಮಾಡಲು ಸಿಂಡಿಕೇಟ್ ಅನುಮೋದಿಸಿತು.

***Proceedings of the Special meeting of the Syndicate held on 21.03.2023***

**ವಿಷಯ ಸಂಖ್ಯೆ 15:** ದಿನಾಂಕ 08.02.2023 ರಂದು ನಡೆದ ಕೇಂದ್ರ ಖರೀದಿ ಸಮಿತಿ ಸಭೆಯ ನಡಾವಳಿಯ ಅನುಮೋದನೆ ಕುರಿತು.

**ನಿರ್ಣಯ:**

ದೀರ್ಘ ಚರ್ಚೆಯ ನಂತರ, ದಿನಾಂಕ 08.02.2023 ರಂದು ನಡೆದ ಕೇಂದ್ರ ಖರೀದಿ ಸಮಿತಿ ಸಭೆಯ ನಡಾವಳಿಯ ಅನುಮೋದನೆಯನ್ನು ಸಿಂಡಿಕೇಟ್ ಪರಿಗಣಿಸಿ ಅನುಮೋದಿಸಿತು.

***Proceedings of the Special meeting of the Syndicate held on 21.03.2023***

**ವಿಷಯ ಸಂಖ್ಯೆ 16:** 2021–22ನೇ ಸಾಲಿನ ಬೆಂಗಳೂರು ವಿಶ್ವವಿದ್ಯಾಲಯದ ವಾರ್ಷಿಕ ವರದಿಯನ್ನು ಪರಿಗಣಿಸುವುದರ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, 2021–22ನೇ ಸಾಲಿನ ಬೆಂಗಳೂರು ವಿಶ್ವವಿದ್ಯಾಲಯದ ವಾರ್ಷಿಕ ವರದಿಯನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 51 (i ಮತ್ತು ii)ರ ಪ್ರಕಾರ ಪರಿಗಣಿಸಿ ಅನುಮೋದಿಸಿತು.

**Item No. 17:** Dr. Krishna A, Professor, Dept. of Civil Engineering, U.V.C.E requesting for VRS (Voluntary Retirement from Service) from Bangalore University service.

***Resolution:***

After detailed discussions, the Syndicate resolved to consider the request of Dr. Krishna A, Professor, Dept. of Civil Engineering, U.V.C.E for Voluntary Retirement and permitted him to take voluntary retirement w.e.f. 31.03.2023 as per KCSR Rule 285(2).

*Proceedings of the Special meeting of the Syndicate held on 21.03.2023*

**Item No. 18:** Regarding payment of Honorarium to the superannuated teachers whose services are continued till the end of academic year.

The Finance Officer opined that the University order by fixing the Honorarium of Rs.50,000/- per month for the retired teachers may be made effective for the teachers listed in the agenda note and those who have retired from the service during the year 2022 i.e, w.e.f 31.01.2022. The difference of amount may be recovered from them while settling their pensionary benefits.

***Resolution:***

After detailed discussions, the Syndicate resolved to modify its earlier resolution dated: 31.10.2022 and to make the University Order No.EST-II/E3/APT/L/EDU/98-99/2022 dated: 14.12.2022 applicable w.e.f. 31.01.2022. The Syndicate further directed to recover the difference of amount while settling the pensionary benefits to the teachers listed in the agenda note.

*Proceedings of the Special meeting of the Syndicate held on 21.03.2023*

**Item No. 19:** To consider nomination of three experts to the Selection Committee for Selection/ Promotion of the University teachers/Librarian and Director Physical Education

***Resolution:***

Deferred.

21/3/23

**Item No. 20:** Proceedings of meeting of the reviewed Library Committee Meeting held on 22nd February 2023 and E-Resource Procurement Committee meeting held on 10th March-2023.

***Resolution:***

After detailed discussions, the Syndicate resolved to approve the proceedings of meeting of the reviewed Library Committee Meeting held on 22 February 2023 and E-Resource Procurement Committee meeting held on 10th March-2023.



**Item No. 21:** Establishment of Skill Development Centre and IT Centre at Pre Examination Coaching Centre at Jnana Bharathi Campus, BUB.

The Vice-Chancellor informed the Syndicate that the Managing Director, Karnataka Skill Development Corporation, Government of Karnataka has come forwarded to setup a Skill Development Centre and a Language Lab in Bangalore University. There is no financial commitment on the part of the Bangalore University. This will help the Bangalore University students.

***Resolution:***

After detailed discussions, the Syndicate resolved to approve the establishment of Skill Development Centre and IT Centre at Pre Examination Coaching Centre at Jnana Bharathi Campus of Bangalore University.



**ವಿಷಯ ಸಂಖ್ಯೆ 22:** ಬೆಂಗಳೂರು ವಿಶ್ವವಿದ್ಯಾಲಯದ 2016-17ನೇ ಸಾಲಿನ ವಾರ್ಷಿಕ ಲೆಕ್ಕ ಪರಿಶೋಧನಾ ವರದಿಗೆ ಉತ್ತರ ಸಮೇತ ವರದಿಯನ್ನು ಅನುಮೋದಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ಬೆಂಗಳೂರು ವಿಶ್ವವಿದ್ಯಾಲಯದ 2016-17ನೇ ಸಾಲಿನ ವಾರ್ಷಿಕ ಲೆಕ್ಕ ಪರಿಶೋಧನಾ ವರದಿಗೆ ಉತ್ತರ ಸಮೇತ ವರದಿಯನ್ನು ಸಿಂಡಿಕೇಟ್ ಪರಿಗಣಿಸಿ ಅನುಮೋದಿಸಿತು.

**Proceedings of the Special meeting of the Syndicate held on 21.03.2023**

**ವಿಷಯ ಸಂಖ್ಯೆ 23:** ದಿನಾಂಕ 18.03.2023 ರಂದು ನಡೆದ ಹಣಕಾಸು ಸಮಿತಿ ಸಭೆಯ ನಡಾವಳಿಯ ಅನುಮೋದನೆ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ದಿನಾಂಕ 18.03.2023 ರಂದು ನಡೆದ ಹಣಕಾಸು ಸಮಿತಿ ಸಭೆಯ ನಡಾವಳಿಯನ್ನು ಸಿಂಡಿಕೇಟ್ ಪರಿಗಣಿಸಿ ಅನುಮೋದಿಸಿತು.

**Proceedings of the Special meeting of the Syndicate held on 21.03.2023**

**ವಿಷಯ ಸಂಖ್ಯೆ 24:** ದೂರ ಶಿಕ್ಷಣ ನಿರ್ದೇಶನಾಲಯಕ್ಕೆ ಆನ್ಲೈನ್ ಸೇವೆಯನ್ನು ಒದಗಿಸುತ್ತಿರುವ ಮೆರಿಟ್ರ್ಯಾಕ್ (Merit-trac) ಕಂಪನಿಯವರಿಗೆ ಸಂದಾಯವಾಗಬೇಕಾದ ರೂ. 4,83,840/- ಗಳ ಬಿಲ್ ನ ಮೊತ್ತವನ್ನು ಮಂಜೂರು ಮಾಡಲು ಹಾಗೂ ಸದರಿ ಕಂಪನಿಯ ಸೇವೆಯನ್ನು ಮುಂದುವರಿಸುವ ಬಗ್ಗೆ ಮನವಿ.

ಆಹ್ವಾನಿತರಾಗಿ ಭಾಗವಹಿಸಿದ್ದ ವಿತ್ತಾಧಿಕಾರಿಯವರು ಮಾತನಾಡಿ, 2017ರಿಂದ ಆರು ವರ್ಷಗಳ ಕಾಲ ಕಾರ್ಯಾದೇಶ ನೀಡದೆ ದೂರ ಶಿಕ್ಷಣ ನಿರ್ದೇಶನಾಲಯದಲ್ಲಿ ಮೆ. ಮೆರಿಟ್ರ್ಯಾಕ್ (Merit-trac) ಸಂಸ್ಥೆಯು ಆನ್-ಲೈನ್ ಪ್ರವೇಶಾತಿ ಹಾಗೂ ಪರೀಕ್ಷೆಗೆ ಸಂಬಂಧಿಸಿದ ಕಾರ್ಯವನ್ನು ನಿರ್ವಹಿಸಿರುವ ಸಾಧ್ಯತೆ ಬಗ್ಗೆ ಪ್ರಶ್ನಿಸಿದರು. ವಿಶ್ವವಿದ್ಯಾಲಯದ ಕಾರ್ಯಾದೇಶವಿಲ್ಲದೆ ಕೆಲಸ ನಿರ್ವಹಿಸಿರುವ ಬಾಬ್ತಿಗೆ ಸಂಬಂಧಿಸಿದಂತೆ ಹಣಪಾವತಿ ಮಾಡಲು ಸಾಧ್ಯವಿಲ್ಲವೆಂದು ತಿಳಿಸಿದರು. ಅವರು ಮುಂದುವರೆದು ಈ ಬಗ್ಗೆ ಘಟನೋತ್ತರ ಕಾರ್ಯಾದೇಶವನ್ನು ನೀಡಲು ಬರುವುದಿಲ್ಲವೆಂದರು.

**ನಿರ್ಣಯ:**

ಚರ್ಚೆಯ ನಂತರ, ವಿಶ್ವವಿದ್ಯಾಲಯದ ಕಾರ್ಯಾದೇಶವನ್ನು ನೀಡದೇ ಇರುವುದರಿಂದ ಮೆ. ಮೆರಿಟ್ರ್ಯಾಕ್ (Merit-trac) ಸಂಸ್ಥೆಗೆ 2017-18ರಿಂದ ಆನ್-ಲೈನ್ ಸೇವೆ ನಿಮಿತ್ತ ಸಲ್ಲಿಸಿರುವ ಬಿಲ್ ಮೊತ್ತ ರೂ.4,83,840/- ಗಳನ್ನು ಪಾವತಿ ಮಾಡಲು ನಿಯಮಾನುಸಾರ ಸಾಧ್ಯವಿಲ್ಲವೆಂದು ನಿರ್ಣಯಿಸಿ ಸಿಂಡಿಕೇಟ್ ಪ್ರಸ್ತಾವನೆಯನ್ನು ತಿರಸ್ಕರಿಸಿತು.

**Proceedings of the Special meeting of the Syndicate held on 21.03.2023**

**ವಿಷಯ ಸಂಖ್ಯೆ 25:** ಬೆಂಗಳೂರು ವಿಶ್ವವಿದ್ಯಾಲಯದ ಆಡಳಿತ ಕಚೇರಿಯ ಸೆನೆಟ್ ಹಾಲ್ ಪಕ್ಕದ ಕೊಠಡಿಯಲ್ಲಿರುವ ಶ್ರೀ ಭಗವಾನ್ ಬುದ್ಧ ಪ್ರತಿಮೆಯನ್ನು ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರಕ್ಕೆ ಸ್ಥಳಾಂತರಿಸುವ ಬಗ್ಗೆ.

ಡಾ. ಸುಧಾಕರ ಹೆಚ್ ಅವರು ಮಾತನಾಡಿ, ಶ್ರೀ ಭಗವಾನ್ ಬುದ್ಧ ಪ್ರತಿಮೆಯನ್ನು ಗೌರವಯುತವಾಗಿ ಸ್ಥಳಾಂತರಿಸಬೇಕಾಗಿದೆ. ಶ್ರೀ ಬುದ್ಧ ಧ್ಯಾನ ಕೇಂದ್ರ ನಿರ್ಮಿಸಲು ಜ್ಞಾನಭಾರತಿ ಆವರಣದಲ್ಲಿ ಎರಡು ಎಕರೆ

21/3/23

ಜಮೀನನ್ನು ಮೀಸಲಿರಿಸಿದ್ದು, ಈಗಾಗಲೇ ಗುದ್ದಲಿ ಪೂಜೆಯನ್ನು ನೆರವೇರಿಸಲಾಗಿದೆ ಎಂದು ಸಭೆಯ ಗಮನಕ್ಕೆ ತಂದರು.

ಕುಲಸಚಿವರು ಮಾತನಾಡಿ, ಸೆನೆಟ್ ಸಭಾಂಗಣವನ್ನು ನವೀಕರಿಸಲಾಗುತ್ತಿದ್ದು, ಪ್ರಸ್ತುತ ಸಣ್ಣ ಕೊಠಡಿಯಲ್ಲಿರುವ ಶ್ರೀ ಭಗವಾನ್ ಬುದ್ಧ ಪ್ರತಿಮೆಯನ್ನು ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ಭವನದ ಸುಪರ್ದಿಗೆ ನೀಡಲು ಸದರಿ ಅಧ್ಯಯನ ಕೇಂದ್ರದ ನಿರ್ದೇಶಕರೊಂದಿಗೆ ಚರ್ಚಿಸಲಾಗಿದೆ ಎಂದು ತಿಳಿಸಿ, ಸದರಿ ಪ್ರತಿಮೆಯನ್ನು ಸ್ಥಳಾಂತರಿಸುವ ಅವಶ್ಯಕತೆಯ ಬಗ್ಗೆ ವಿವರಿಸಿದರು.

**ನಿರ್ಣಯ:**

ಚರ್ಚೆಯ ನಂತರ, ಶ್ರೀ ಭಗವಾನ್ ಬುದ್ಧ ಪ್ರತಿಮೆಯನ್ನು ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ಭವನಕ್ಕೆ ಸ್ಥಳಾಂತರಿಸಲು ಸಿಂಡಿಕೇಟ್ ಅನುಮತಿಸಿತು.

## General Discussion:-

1) ಶ್ರೀ ಉದಯ ಕುಮಾರ್ ಎಂ ಅವರು ಮಾತನಾಡಿ, ವಿಶ್ವವಿದ್ಯಾಲಯ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜಿಗೆ (ಯು.ವಿ.ಸಿ.ಇ.) ಪ್ರತಿಭಾನ್ವಿತ ವಿದ್ಯಾರ್ಥಿಗಳು ಪ್ರವೇಶ ಪಡೆಯುತ್ತಾರೆ. ಆದರೆ, ಯು.ವಿ.ಸಿ.ಇ. ಹಾಸ್ಟೆಲ್‌ನಲ್ಲಿ ಗುಣಮಟ್ಟದ ಆಹಾರ ನೀಡುತ್ತಿಲ್ಲ. ಯು.ವಿ.ಸಿ.ಇ.ಯು 31.03.2023ರ ನಂತರ ವಿಶ್ವವಿದ್ಯಾಲಯದ ಅಧೀನದಲ್ಲೇ ಮುಂದುವರೆದರೆ ಯು.ವಿ.ಸಿ.ಇ. ಹಾಸ್ಟೆಲ್‌ನ ವಾರ್ಡನ್ ಅನ್ನು ಬಿಡುಗಡೆಗೊಳಿಸಿ ಬೇರೆ ವ್ಯವಸ್ಥೆ ಆಗುವವರೆಗೂ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ನಿರ್ದೇಶಕರಿಗೆ ಪ್ರಭಾರ ಅಧಿಕಾರ ನೀಡಬೇಕೆಂದು ಕೋರಿದರು ಹಾಗೂ ಯು.ವಿ.ಸಿ.ಇ. ವಿಶ್ವವಿದ್ಯಾಲಯದಡಿ ಮುಂದುವರೆಯದಿದ್ದರೆ, ಅಲ್ಲಿ ಕೆಲಸ ನಿರ್ವಹಿಸುತ್ತಿರುವ ದಿನಗೂಲಿ ನೌಕರರನ್ನು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ವರ್ಗಾವಣೆ ಮಾಡಬೇಕೆಂದು ಕೋರಿದರು.

   ಕುಲಪತಿಗಳು ಮಾತನಾಡಿ, ಯು.ವಿ.ಸಿ.ಇ. ಹಾಸ್ಟೆಲ್ ವಾರ್ಡನ್ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. ಆದರೆ, ಯು.ವಿ.ಸಿ.ಇ. ಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ದಿನಗೂಲಿ ಹಾಗೂ ಹೊರಗುತ್ತಿಗೆ ನೌಕರರನ್ನು ವಿಶ್ವವಿದ್ಯಾಲಯಕ್ಕೆ ತೆಗೆದುಕೊಳ್ಳಲು ಸಾಧ್ಯವಿಲ್ಲ, ಕಾರಣ ವಿಶ್ವವಿದ್ಯಾಲಯದಲ್ಲಿ ಈಗಾಗಲೇ ಹೆಚ್ಚುವರಿ ಸಿಬ್ಬಂದಿಗಳು ಕೆಲಸ ನಿರ್ವಹಿಸುತ್ತಿದ್ದಾರೆ, ಯು.ವಿ.ಸಿ.ಇ. ಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ದಿನಗೂಲಿ ಹಾಗೂ ಹೊರಗುತ್ತಿಗೆ ನೌಕರರನ್ನು ಯು.ವಿ.ಸಿ.ಇ.ನಲ್ಲೇ ಮುಂದುವರೆಸಬೇಕೆಂದು ಈಗಾಗಲೇ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ ಎಂದು ಸ್ಪಷ್ಟಪಡಿಸಿದರು.

2) ಡಾ. ಸುಧಾಕರ ಹೆಚ್ ಅವರು ಮಾತನಾಡಿ, ಕೆ.ಎಸ್.ಯು. ಅಧಿನಿಯಮದ ಪ್ರಕಾರ ಹಣಕಾಸು ಸಮಿತಿಗೆ ಸಿಂಡಿಕೇಟ್ ಪ್ರಾಧಿಕಾರವು ಒಬ್ಬ ಸದಸ್ಯರನ್ನು ನಾಮ ನಿರ್ದೇಶನ ಮಾಡಬೇಕಾಗಿದೆ. ಹಣಕಾಸು ಸಮಿತಿಗೆ ಸಿಂಡಿಕೇಟ್ ಅನುಮೋದನೆ ಇಲ್ಲದೆ ನಾಮನಿರ್ದೇಶನ ಮಾಡಿರುವುದಕ್ಕೆ ಆಕ್ಷೇಪಣೆ ವ್ಯಕ್ತಪಡಿಸಿದರು.

   ಕುಲಪತಿಗಳು ಮಾತನಾಡಿ, ಸಿಂಡಿಕೇಟ್‌ನ ಅನುಮೋದನೆಗೊಳಪಟ್ಟು ಶ್ರೀ ಹರೀಶ್ ನಾಯಕ್, ಸಿಂಡಿಕೇಟ್ ಸದಸ್ಯರು ಇವರನ್ನು ಹಣಕಾಸು ಸಮಿತಿಗೆ ಮುಂದಿನ ಆದೇಶದವರೆಗೆ ನಾಮನಿರ್ದೇಶನ ಮಾಡಲಾಗಿದೆ. ಸರ್ಕಾರ/ಮಾನ್ಯ ರಾಜ್ಯಪಾಲರ ನಾಮನಿರ್ದೇಶಿತ ಸದಸ್ಯರ ಜೊತೆಗೆ ಪ್ರಾಂಶುಪಾಲರುಗಳೂ ಸಹ ಸಿಂಡಿಕೇಟ್ ಸದಸ್ಯರಾಗಿದ್ದು, ಎಲ್ಲರನ್ನೂ

ಸಹ ಒಂದೇ ಸಮಾನಾಂತರವಾಗಿ ಪರಿಗಣಿಸಬೇಕಾಗುತ್ತದೆ. ಯಾವುದೇ ಸಿಂಡಿಕೇಟ್ ಸದಸ್ಯರುಗಳಿಗೆ ಪ್ರತ್ಯೇಕ ಅಧಿಕಾರಗಳಿರುವುದಿಲ್ಲವೆಂದರು. ಇನ್ನು ಮುಂದೆ ಸಿಂಡಿಕೇಟ್ ಸಭೆಯ ಅನುಮೋದನೆ ಪಡೆದು ನಾಮ ನಿರ್ದೇಶನವನ್ನು ಮಾಡುವ ಬಗ್ಗೆ ಕಡತ ಸಲ್ಲಿಸಲು ಸಂಬಂಧಪಟ್ಟ ವಿಭಾಗಕ್ಕೆ ಸೂಚಿಸಲಾಗುವುದು ಎಂದು ತಿಳಿಸಿದರು.

3) ಶ್ರೀ ಉದಯ ಕುಮಾರ್ ಎಂ ಅವರು ಮಾತನಾಡಿ, ದಿನಗೂಲಿ ನೌಕರರಾದ ಶ್ರೀ ಆಂಜಲಪ್ಪ ಅವರು ದಿನಾಂಕ: 01-04-2006ಗೆ ಮುಂಚಿತವಾಗಿ 10 ವರ್ಷಗಳ ಸೇವೆಯನ್ನು ಪೂರೈಸಿರುವುದರಿಂದ ಅವರನ್ನು ಖಾಯಂಗೊಳಿಸಬೇಕೆಂದು ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ಒತ್ತಾಯಿಸಿದರೂ ಕೂಡ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ವಿಶ್ವವಿದ್ಯಾಲಯದ ಗ್ರಂಥಾಲಯದಲ್ಲಿ ಪ್ರಾಜೆಕ್ಟ್‌ನಲ್ಲಿ ಕೆಲಸ ನಿರ್ವಹಿಸುತ್ತಿದ್ದ ಶ್ರೀಮತಿ ರಜನಿ ಹಾಗೂ ಶ್ರೀ ಅರುಣಾಚಲಪತಿ ಅವರನ್ನು ದಿನಗೂಲಿ ನೌಕರರ ಪಟ್ಟಿಗೆ ನಿಯಮಭಾಹಿರವಾಗಿ ಸೇರಿಸಲಾಗಿದೆ. ಶ್ರೀ ಆಂಜಲಪ್ಪ ಅವರು ದಿನಗೂಲಿ ನೌಕರರಾಗಿ ವಿಶ್ವವಿದ್ಯಾಲಯದ ಸೇವೆಗೆ ಸೇರಿದ ನಂತರ ದಿನಗೂಲಿ ನೌಕರರಾಗಿ ನೇಮಕ ಹೊಂದಿದ್ದ ಶೀಮತಿ ಜಯಮ್ಮ ಹಾಗೂ ಶ್ರೀ ನಾಗರಾಜ್ ಅವರನ್ನು ಖಾಯಂಗೊಳಿಸಲಾಗಿದೆ. ಒಂದು ವೇಳೆ ಶ್ರೀ ಆಂಜಲಪ್ಪ ಅವರನ್ನು ಖಾಯಂಗೊಳಿಸಲಾಗದಿದ್ದರೆ ಇವರುಗಳ ಸೇವೆಯನ್ನು ತೆಗೆದು ಹಾಕಿ ಎಂದು ತಿಳಿಸಿದರು. ಅವರು ಮುಂದುವರೆದು, ದಿನಗೂಲಿ ನೌಕರರಿಗೆ ನೀಡುತ್ತಿರುವ ಶೇ 75ರಷ್ಟು ತುಟ್ಟಿ ಭತ್ಯೆಯನ್ನು ಶೇ90ಕ್ಕೆ ಹೆಚ್ಚಿಸಬೇಕೆಂದು ಒತ್ತಾಯಿಸಿದರು.

4) ಕುಲಪತಿಗಳು ಮಾತನಾಡಿ, ಈ ಹಿಂದೆ ಡಾ. ಕಾ.ವೆಂ. ಶ್ರೀನಿವಾಸಮೂರ್ತಿ ಅವರ ಮೇಲಿನ ಆಪಾದನೆಯ ಬಗ್ಗೆ Internal Committee ಯ ವರದಿಯನುಸಾರ ಸಿಂಡಿಕೇಟ್ ನಿರ್ಣಯ ತೆಗೆದುಕೊಂಡಿದೆ. ಅವರು ಸಲ್ಲಿಸಿದ ಮೇಲ್ಮನವಿಯ ಕುರಿತು ಘನತೆವೆತ್ತ ರಾಜ್ಯಪಾಲರು ಪ್ರಕರಣವನ್ನು ಪರಿಶೀಲಿಸಿ ಅವರ ಮೇಲೆ ವಿಶ್ವವಿದ್ಯಾಲಯ ಕೈಗೊಂಡ ಕ್ರಮ ನ್ಯಾಯ ಸಮ್ಮತವಾಗಿದೆ ಎಂದು ಆದೇಶ ನೀಡಿರುವುದರಿಂದ, ಈ ಹಂತದಲ್ಲಿ ಪ್ರಸ್ತುತ ಅವರು ಸಲ್ಲಿಸಿರುವ ಮನವಿಯ ಬಗ್ಗೆ ಪರಿಗಣಿಸಲಿಕ್ಕೆ ಆಗುವುದಿಲ್ಲವೆಂದು ತಿಳಿಸಿ ಅವರ ಮನವಿಯನ್ನು ಕುರಿತು ಒಂದು ಕಾನೂನು ಅಭಿಪ್ರಾಯ ಪಡೆದುಕೊಂಡು ಮಾನ್ಯ ರಾಜ್ಯಪಾಲರಿಗೆ ಅವರ ಮನವಿಯನ್ನು ಕಳುಹಿಸಿಕೊಡಬಹುದಾಗಿದೆ ಎಂದು ತಿಳಿಸಿದರು.

ಈ ವಿಷಯವಾಗಿ ಸಿಂಡಿಕೇಟ್ ಒಪ್ಪಿಗೆ ಸೂಚಿಸಿತು.

5) ಡಾ. ಕೆ.ಎ. ಮಹೇಶ್ವರಯ್ಯ ಅವರು ಮಾತನಾಡಿ, ಹಿಂದೆ ಕಾಲೇಜುಗಳ ಗೌವರ್ನಿಂಗ್ ಕೌನ್ಸಿಲ್‌ಗೆ ವಿಶ್ವವಿದ್ಯಾಲಯದಿಂದ ನಾಮನಿರ್ದೇಶನ ಮಾಡಿದ್ದ ಸದಸ್ಯರ ಅವಧಿಯು ಮುಗಿದಿದ್ದು, ಹೊಸದಾಗಿ ನಾಮನಿರ್ದೇಶನ ಮಾಡಬೇಕೆಂದು ಹಾಗೂ ಸಂಯೋಜನಾ ನವೀಕರಣಕ್ಕೆ ಆದಷ್ಟು ಬೇಗ ಅರ್ಜಿಗಳನ್ನು ಆಹ್ವಾನಿಸಬೇಕೆಂದು ಕೋರಿದರು. ಅವರು ಮುಂದುವರೆದು, ಖಾಸಗಿ ಕಾಲೇಜುಗಳ ಅಧ್ಯಾಪಕರುಗಳನ್ನು ಮೌಲ್ಯಮಾಪನ ಕಾರ್ಯಕ್ಕೆ ಕಳುಹಿಸುವ ಬಗ್ಗೆ ಮಾಹಿತಿ ನೀಡುವುದಿಲ್ಲ. ವಾಟ್ಸ್ ಅಪ್ ಗ್ರೂಪ್ ಮಾಡಿಕೊಂಡಿರುವ ಶಿಕ್ಷಕರಿಗೆ ಮಾತ್ರ ಪ್ರತಿಭಾರಿ ಅವಕಾಶ ನೀಡಲಾಗುತ್ತದೆ. ಮೌಲ್ಯಮಾಪನದಲ್ಲಿ ತಪ್ಪುಗಳಾದಲ್ಲಿ ಉತ್ತರ ಪತ್ರಿಕೆಗಳ ಫೋಟೋ ಕಾಪಿ ತೆಗೆದುಕೊಳ್ಳಲು ನಿಗದಿಪಡಿಸಿರುವ ಶುಲ್ಕಗಳು ದುಬಾರಿಯಾಗಿದ್ದು, ಈ ದರಗಳನ್ನು ಪರಿಷ್ಕರಿಸಿ ಕೈಗೆಟುಕುವ ದರವನ್ನು ನಿಗದಿಪಡಿಸಬೇಕು. ಪರೀಕ್ಷಾ ವಿಭಾಗದಲ್ಲಿ ಒಳ್ಳೆಯ ತಾಂತ್ರಿಕ ಸಿಬ್ಬಂದಿಗಳನ್ನು ನೇಮಿಸಬೇಕು. Wrong bubling ಅನ್ನು ಕಡಿಮೆ ಮಾಡಲು ಕ್ರಮ ಕೈಗೊಳ್ಳಬೇಕು. Open

Electives ಹಾಗೂ AECS ವಿಷಯಗಳನ್ನು ಶೈಕ್ಷಣಿಕ ವರ್ಷವು ಪ್ರಾರಂಭವಾಗುವುದಕ್ಕಿಂತ ಮುಂಚಿತವಾಗಿ ಪ್ರಕಟಿಸಬೇಕೆಂದು ಕೋರಿದರು.

ಕುಲಪತಿಗಳು ಮಾತನಾಡಿ ಈ ಬಗ್ಗೆ ಸೂಕ್ತ ಕ್ರಮ ವಹಿಸಲು ಸಂಬಂಧಪಟ್ಟವರಿಗೆ ಸೂಚಿಸಲಾಗುವುದು ಎಂದು ತಿಳಿಸಿದರು.

6) ಪ್ರೊ. ವಿ.ವಿ. ಸುರೇಶ್ ಬಾಬು ಅವರು ಮಾತನಾಡಿ, ಭಾರತೀಯ ವಿಜ್ಞಾನ ಸಂಸ್ಥೆ, ಬೆಂಗಳೂರು ಆವರಣದಲ್ಲಿ ಶ್ರೀ ಜೆಮ್‌ಷೆಡ್ ಟಾಟಾ ಅವರ ಪುತ್ಥಳಿಯನ್ನು ಸ್ಥಾಪಿಸಿರುವ ರೀತಿಯಲ್ಲಿ ವಿಶ್ವವಿದ್ಯಾಲಯದ ಆವರಣದ ಸೂಕ್ತ ಸ್ಥಳದಲ್ಲಿ ಡಾ. ಹೆಚ್. ನರಸಿಂಹಯ್ಯನವರ ಪುತ್ಥಳಿಯನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು.

ಕುಲಪತಿಗಳು ಉತ್ತರಿಸಿ ಈಗಾಗಲೇ ಡಾ. ಹೆಚ್. ನರಸಿಂಹಯ್ಯನವರ ಪುತ್ಥಳಿಯನ್ನು ಸ್ಥಾಪಿಸುವ ಬಗ್ಗೆ ಸಿಂಡಿಕೇಟ್ ನಿರ್ಣಯ ತೆಗೆದುಕೊಂಡಿದೆ. ಸ್ಥಳ ನಿಗದಿಯಾದ ನಂತರ ಸದರಿ ಕಾರ್ಯವನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

| | |
|---|---|
| ಸಹಿ/- | ಸಹಿ/- |
| **ಕುಲಸಚಿವರು** | **ಕುಲಪತಿಯವರು** |

//ಪ್ರತಿ//

ಕುಲಸಚಿವರು 31/7/17